CC 639/2020

# 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ
# ಕ್ರಿಮಿನಲ್ ಪ್ರಕರಣ ಸಂಖ್ಯೆ- 639/2020

ಪಿರ್ಯಾದುದಾರರು - ತಾವರೆಕೆರೆ ಪೋಲಿಸ್ ಠಾಣೆ

ವಿರುದ್ಧ

ಆರೋಪಿಗಳು - 1. ಶ್ರೀ. ರುದ್ರಯ್ಯ
ಬಿನ್ ಕರಿತಿಮ್ಮಯ್ಯ
ವಯಸ್ಸು 70 ವರ್ಷ,

2. ಶ್ರೀ.ಗೋವಿಂದರಾಜು
ಬಿನ್ ರುದ್ರಪ್ಪ
ವಯಸ್ಸು 33 ವರ್ಷ

3. ಶ್ರೀ.ವೆಂಕಟೇಶ
ಬಿನ್ ರುದ್ರಪ್ಪ
ವಯಸ್ಸು 35 ವರ್ಷ,

4. ಶ್ರೀಮತಿ.ಜಯಮ್ಮ
ಕೋಂ. ರುದ್ರಯ್ಯ
ವಯಸ್ಸು 60 ವರ್ಷ,

5. ಶ್ರೀಮತಿ.ಮಂಜುಳ
ಕೋಂ. ಗೋವಿಂದರಾಜು
ವಯಸ್ಸು 25 ವರ್ಷ,

6. ಶ್ರೀಮತಿ.ಯಶೋಧ
ಕೋಂ. ವೆಂಕಟೇಶ
ವಯಸ್ಸು 28 ವರ್ಷ,

ಎಲ್ಲರ ವಾಸಃ ಕೇತೋಹಳ್ಳಿ,
ಚುಂಚನಕುಪ್ಪೆ,
ತಾವರೆಕೆರೆ ಹೋಬಳಿ,
ಬೆಂಗಳೂರು ಸಿಟಿ.

## ದೋಷಾರೋಪಣೆ

(ಶ್ರೀಮತಿ. ರಂಜಿತ ಜಿ.ಬಿ, 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮಾಗಡಿ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ)

CC 639/2020

1. ರುದ್ರಯ್ಯ
2. ಗೋವಿಂದರಾಜು
3. ವೆಂಕಟೇಶ
4. ಜಯಮ್ಮ
5. ಮಂಜುಳ
6. ಯಶೋದ ಎಂಬ ನೀವುಗಳು

ದಿನಾಂಕ 04-03-2020 ರಂದು ಸಂಜೆ 7.30 ಗಂಟೆ ಸಮಯದಲ್ಲಿ ತಾವರೆಕೆರೆ ಪೋಲೀಸ್ ಠಾಣೆಯ ಸರಹದ್ದು, ಕೇತೋಹಳ್ಳಿ ಗ್ರಾಮದ ಚಾಸಾ-1 ರವರ ಮನೆಯ ಮುಂದೆ ಚಾಸಾ-1 ರವರು ನಲ್ಲಿಯ ನೀರು ಬಿಡುವ ವಿಚಾರವಾಗಿ 1 ನೇ ಆರೋಪಿಯನ್ನು ಕೇಳಿದ್ದಕ್ಕೆ ಅದೇ ದಿನ ಸಂಜೆ ನೀವುಗಳು ಚಾಸಾ-1 ರವರ ಮನೆಯ ಬಳಿ ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-143 ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಏಕೋದ್ದೇಶದಿಂದ ಚಾಸಾ-1 ರವರು ಮನೆಯ ಬಳಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ದೊಂಬಿ ಗಲಾಟೆ ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-147 ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಮೂರನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಚಾಸಾ-1 ರವರಿಗೆ 3 ನೇ ಆರೋಪಿಯು ಸರಳಿನಿಂದ ಚಾಸಾ-1 ರವರ ಬೆನ್ನಿಗೆ ಹೊಡೆದು ಗಾಯಗೊಳಿಸಿ ನಂತರ ಕೆಳಗೆ ಹಾಕಿಕೊಂಡು ತುಳಿದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-324 ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ನಾಲ್ಕನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಚಾಸಾ-1 ರವರಿಗೆ 3 ನೇ ಆರೋಪಿಯು ಸರಳಿನಿಂದ ಚಾಸಾ-1 ರವರ ಬೆನ್ನಿಗೆ ಹೊಡೆದು ಗಾಯಗೊಳಿಸಿ ನಂತರ ಕೆಳಗೆ ಹಾಕಿಕೊಂಡು ಚಪ್ಪಲಿ ಕಾಲಿಯಲ್ಲಿ ತುಳಿಯುತ್ತಿದ್ದಾಗ ಬಿಡಿಸಲು ಬಂದ ಚಾಸಾ-2 ರವರಿಗೂ ಸಹ ಹಿಡಿದು ಎಳೆದಾಡಿ ಚಪ್ಪಲಿಯಿಂದ ಹೊಡೆದು ಸೀರೆಯನ್ನು ಎಳೆದಾಡಿ ಅವಮಾನ ಪಡಿಸಿದ್ದು ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-354-ಬಿ ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಐದನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಏಕೋದ್ದೇಶದಿಂದ ಚಾಸಾ-1 ರವರಿಗೆ 3 ನೇ ಆರೋಪಿಯು ಸರಳಿನಿಂದ ಚಾಸಾ-1 ರವರ ಬೆನ್ನಿಗೆ ಹೊಡೆದು ಗಾಯಗೊಳಿಸಿ ನಂತರ ಕೆಳಗೆ ಹಾಕಿಕೊಂಡು ಚಪ್ಪಲಿ ಕಾಲಿನಿಂದ ತುಳಿದಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-355 ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಆರನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ನಲ್ಲಿಯಲ್ಲಿ ನೀರು ಬಿಡುವ ವಿಚಾರವಾಗಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಶಾಂತಿಯತೆಗೆ ಭಂಗ ಉಂಟು ಮಾಡಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-504 ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ನೀವುಗಳು ಏಕೋದ್ದೇಶದಿಂದ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಚಾಸಾ-1 ಮತ್ತು ಚಾಸಾ-2 ರವರಿಗೆ 3 ನೇ ಆರೋಪಿಯ ಇನ್ನು ಮುಂದೆ ಪಂಚಾಯ್ತಿಯ ನೀರನ್ನು ಬಿಟ್ಟುಕೊಂಡರೆ ನಿನ್ನನ್ನು ಜೀವಂತವಾಗಿ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ-506 ಸಹವಾಚಕ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 - ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ, ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೆ?

**ಆರೋಪಿ-1 ರವರ ಉತ್ತರ -**
**ಆರೋಪಿ-2 ರವರ ಉತ್ತರ -**
**ಆರೋಪಿ-3 ರವರ ಉತ್ತರ -**
**ಆರೋಪಿ-4 ರವರ ಉತ್ತರ -**
**ಆರೋಪಿ-5 ರವರ ಉತ್ತರ -**
**ಆರೋಪಿ-6 ರವರ ಉತ್ತರ -**

ಪ್ರಶ್ನೆ-2 - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಇಚ್ಛಿಸುವಿರೋ ?

**ಆರೋಪಿ-1 ರವರ ಉತ್ತರ -**
**ಆರೋಪಿ-2 ರವರ ಉತ್ತರ -**
**ಆರೋಪಿ-3 ರವರ ಉತ್ತರ -**
**ಆರೋಪಿ-4 ರವರ ಉತ್ತರ -**
**ಆರೋಪಿ-5 ರವರ ಉತ್ತರ -**
**ಆರೋಪಿ-6 ರವರ ಉತ್ತರ -**

ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

**(ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ದಿನಾಂಕ 22-02-2024 ರಂದು ಸಹಿಯನ್ನು ಮಾಡಿರುತ್ತೇನೆ.)**

**(ರಂಜಿತ ಜಿ.ಬಿ)**
**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಮಾಗಡಿ.**